ವಾರದ ಪತ್ರ

## ಸುದ್ದಿ ವಾಹಿನಿಗಳಿಗೂ ನಶೆ?

ಇತ್ತೀಚಿನ ದಿನಗಳಲ್ಲಿ ನಮ್ಮ 'ಸೋ ಕಾಲ್ಡ್ ಸುದ್ದಿ ವಾಹಿನಿ'ಗಳಿಗೆ ಡ್ರಗ್ಸ್ ಮಾಫಿಯಾ ಕುರಿತ ವಿಷಯಗಳು ಭರ್ಜರಿ ಬೇಟೆ ಸಿಕ್ಕಂತೆ ಆಗಿದೆ.

ಅದರಲ್ಲೂ ಇತ್ತೀಚೆಗಷ್ಟೇ ಒಂದಿಬ್ಬರು ನಟಿಯರು ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂಬ ಆರೋಪದ ಹಿನ್ನಲೆಯಲ್ಲಿ ಬಂಧನ ಆಗಿದ್ದೇ ಆಗಿದ್ದು, ನಮ್ಮ ಸುದ್ದಿ ವಾಹಿನಿಗಳು ಒಬ್ಬರ ಮೇಲೆ ಒಬ್ಬರು ಜಿದ್ದಿಗೆ ಬಿದ್ದವರಂತೆ ತೀರಾ ಕೆಟ್ಟ ಪದಗಳ ಬಳಕೆ ಮಾಡುತ್ತಾ ಹಗಲು ರಾತ್ರಿ ಎನ್ನದೆ ಅಟ್ಟಹಾಸ ಮೆರೆದಿದ್ದು ತೀರಾ ಶೋಚನೀಯ!

ಆರೋಪಿಯ ಖಾಸಗಿ ದೃಶ್ಯಗಳನ್ನು ಪದೇ ಪದೇ ತೋರಿಸುತ್ತಾ ಮತ್ತು ಸಭ್ಯತೆಯ ಎಲ್ಲೆ ಮೀರಿ ವಿಕೃತವಾಗಿ ವರ್ಣಿಸುತ್ತಾ ವೀಕ್ಷಕರಿಗೆ ಇರಿಸು ಮುರಿಸು ಉಂಟುಮಾಡುವುದು ಒಳ್ಳೆಯ ಪತ್ರಿಕೋದ್ಯಮದ ಲಕ್ಷಣವಲ್ಲ. ಟೀವಿಯನ್ನು ಮನೆಯಲ್ಲಿ ನೋಡುತ್ತೇವೆ. ಕುಟುಂಬದ ಸದಸ್ಯರೆಲ್ಲ ಇರುತ್ತಾರೆ. ಸುದ್ದಿಯನ್ನು ಮಕ್ಕಳೂ ನೋಡುತ್ತಿರುತ್ತಾರೆ. ಸುದ್ದಿವಾಹಿನಿಗಳು ಅತ್ಯಂತ ಪ್ರಬಲ ಹಾಗೂ ಅಷ್ಟೇ ಪರಿಣಾಮಕಾರಿ ಮಾಧ್ಯಮ. ಹಾಗಾಗಿ ಜವಾಬ್ದಾರಿಯಿಂದ ಇರಬೇಕು ಎನ್ನುವುದು ನಮ್ಮ ಅಪೇಕ್ಷೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಜಾ ಇಲ್ಲದ 'ಟಾಕೀಸ್'

ತುಂಬ ಅಬ್ಬರದ ಪ್ರಚಾರದ ನಂತರ ಕಲರ್ಸ್ ಕನ್ನಡದಲ್ಲಿ 'ಮಜಾ ಟಾಕೀಸ್' ಹೊಸ ರೂಪದಲ್ಲಿ ಮತ್ತೆ ಆರಂಭವಾಗಿದೆ. ಆದರೆ ಅದರಲ್ಲಿ ಹೊಸತನವೇನೂ ಇಲ್ಲ. 'ಹೊಸ ಬಾಟ್ಲಿಯಲ್ಲಿ ಹಳೆ ಮದ್ಯ' ಎಂಬಂತೆ ಹಿಂದಿನ ಸ್ಕಿಟ್‌ಗಳೇ ಬರುತ್ತಿವೆ.

ಹಿಂದಿಯಲ್ಲಿ ಪ್ರಸಾರವಾಗುವ ಕಪಿಲ್ ಶರ್ಮಾ ಶೋದ ಅನುಕರಣೆಯಂತಿದ್ದರೂ ಶರ್ಮಾನ ಮಾತುಗಳಲ್ಲಿ ಕಂಡುಬರುವ ಪಂಚ್ ಇದರಲ್ಲಿ ಕಂಡುಬರುವುದಿಲ್ಲ. ಗಂಭೀರ ಸ್ವಭಾವದ ಇಂದ್ರಜಿತ್ ಲಂಕೇಶ್ ವೇದಿಕೆಯ ಎದುರಿಗೆ ಸುಮ್ಮನೆ ಕುಳ್ಳಿರಿಸಲಾಗುತ್ತದೆ. ಪೋಷಕ ಪಾತ್ರಗಳ ನಟನೆಯಂತೂ ಹೇಸಿಗೆ ಹುಟ್ಟಿಸುವಂತಿದೆ. ಅಭಿನಯಕ್ಕಿಂತ ಅಂಗ ಚೇಷ್ಟೆಯೇ ಜಾಸ್ತಿ. ಒಟ್ಟಿನಲ್ಲಿ ಕನ್ನಡದ ಎಲ್ಲ ಹಾಸ್ಯ ಕಾರ್ಯಕ್ರಮಗಳಲ್ಲಿ ಹಾಸ್ಯದ ಹೆಸರಲ್ಲಿ ಅಪಹಾಸ್ಯವನ್ನೇ ಬಡಿಸಲಾಗುತ್ತಿದೆ.

—ಮುರಲೀಧರ ಕುಲಕರ್ಣಿ, ಬೀದರ್

## ಹೃದಯಸ್ಪರ್ಶಿ ವಿದಾಯ

ಗಟ್ಟಿಮೇಳದಲ್ಲೊಂದು ಅಪರೂಪದ ಸನ್ನಿವೇಶ. ಅಮೂಲ್ಯಳ ತಂದೆ ಕಂಡಕ್ಟರ್ ಮಂಜುನಾಥರ ನಿವೃತ್ತಿ ನಂತರದ ಬೀಳ್ಕೊಡಿಗೆ ಸಮಾರಂಭ ಮನೆಯಲ್ಲಿ ಆಡಂಬರದಿಂದ ನಡೆಯುವುದು ಅಸಹಜವೆನಿಸಿದರೂ ಎಲ್ಲರ ಸಜಹ ಅಭಿನಯ ಗಮನ ಸೆಳೆಯುವಂತಿತ್ತು. ತಂದೆಗೆ ಕೋಟು ತೊಡಿಸುವ ಅಮೂಲ್ಯಳ ಆಸೆ ವೇದಾಂತನ ಮೂಲಕ ಈಡೇರಿ ಭಾವುಕ ಸನ್ನಿವೇಶ ಸೃಷ್ಟಿಯಾಯಿತು. 'ಪ್ರತಿದಿನ ಬೇರೆ ಬೇರೆ ನಿಲ್ದಾಣಗಳಲ್ಲಿ ಪ್ರಯಾಣಿಕರು ನನಗೆ ವಿದಾಯ ಹೇಳುತ್ತಿದ್ದರು, ಆದರೆ ಇಂದು ಬಸ್ಸೇ ನನಗೆ ವಿದಾಯ ಹೇಳಿದೆ' ಎಂದು ಮಂಜುನಾಥ್ ಮಾರ್ಮಿಕವಾಗಿ ನುಡಿದಾಗ ಅರಿವಿಲ್ಲದೆ ಕಣ್ಣ ಅಂಚಿನಲ್ಲಿ ನೀರು ಕಾಣಿಸಿಕೊಂಡಿತು. ಎಲ್ಲಾ ನಿವೃತ್ತರ ಪಾಡೂ ಹೀಗೇ ತಾನೇ! ಮಾತೇ ಇಲ್ಲದೆ ಎಲ್ಲ ಭಾವಗಳನ್ನೂ ಕಣ್ಣಿನಲ್ಲೇ ತೋರಿಸಿದ ಸುಧಾ ನರಸಿಂಹರಾಜು [ಪರಿ] ತುಂಬಾ ಇಷ್ಟವಾದರು. ಅಪ್ಪನೇ ಆಕಾಶವೆಂದ ಮಕ್ಕಳ ಪ್ರೀತಿಗೆ ಬೆಲೆ ಕಟ್ಟಲಾಗುವುದೇ? ಬಹುತೇಕ ಎಲ್ಲ ಮಧ್ಯಮವರ್ಗದ ಕುಟುಂಬದ ಕನಸಿನಂತಿದ್ದ ಸನ್ನಿವೇಶ ಬಹುಕಾಲ ನೆನಪಿನಲ್ಲಿ ಉಳಿಯುವಂತಿತ್ತು. ಕಾರಣ ಏನೇ ಇರಲಿ, ದೊಡ್ಡ ಮಗಳು ಆರತಿ, ಕಡೇಮಗಳು ಅಂಜಲಿ ಬರದಿದ್ದದ್ದು ಮಾತ್ರ ಸರಿ ಎನಿಸಲಿಲ್ಲ.

—ವಾ. ಮುರಳೀಧರ, ತೀರ್ಥಹಳ್ಳಿ

## ನಾಗಿಣಿ ಚೆನ್ನಾಗಿದೆ

ಝೀ ಕನ್ನಡದ 'ಜೊತೆ ಜೊತೆಯಲಿ'ಯಲ್ಲಿ ಅನುಗೆ ಆರ್ಯವರ್ಧನ್‌ನ ಹಿಂದಿನ ಕಥೆ ಬೇಡ. ಆದರೆ, ವೀಕ್ಷಕರಿಗೆ ಬೇಕಲ್ಲಾ? 'ನಾಗಿಣಿ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಎಲ್ಲ ಪಾತ್ರಧಾರಿಗಳು ಚೆನ್ನಾಗಿ ಅಭಿನಯಿಸುತ್ತಿದ್ದಾರೆ. ಕಥೆ ಬಹಳ ಕುತೂಹಲದಿಂದ ಕೂಡಿದೆ.

—ಬಿ.ಆರ್. ಉಷಾ ಬೆಂಗಳೂರು

## ಸುರಕ್ಷಾ ಸೂಚನೆಗಳನ್ನು ಪಾಲಿಸಬೇಕು!

'ಹೆಲ್ಮೆಟ್ ರಹಿತ ಚಾಲನೆ ಅಪಾಯಕಾರಿ ಹಾಗೂ ಕಾನೂನು ಬಾಹಿರ' ಎಂಬ ಸೂಚನೆಯನ್ನು ಟೀವಿ ಪರದೆಯ ಕೆಳಗೆ ಪ್ರದರ್ಶಿಸುತ್ತಲೇ ಧಾರಾವಾಹಿಯ ಪಾತ್ರಧಾರಿಗಳು ಬೈಕಿನಲ್ಲಿ ಹೆಲ್ಮೆಟ್ ರಹಿತರಾಗಿ ಟ್ರಿಪಲ್ ರೈಡ್ ಹೋಗುವುದನ್ನು ಉದಯ ಟಿವಿಯ 'ಆಕೃತಿ' ಧಾರಾವಾಹಿಯ ಇತ್ತೀಚಿನ ಕಂತೊಂದರಲ್ಲಿ ಗಮನಿಸಿದೆ. ರಸ್ತೆ ಸಾರಿಗೆಯ ಸುರಕ್ಷಾ ಸೂಚನೆಗಳನ್ನು, ಪಾತ್ರಗಳು ಅವುಗಳನ್ನು ಪಾಲಿಸುವ ದೃಶ್ಯಗಳೊಂದಿಗೆ (ಅದು ಕಥೆಗೆ ಪೂರಕವಲ್ಲದ ಸನ್ನಿವೇಶಗಳಲ್ಲಿ) ಪ್ರದರ್ಶಿಸಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆಯೆಂಬ ನಿಜವನ್ನು ಧಾರಾವಾಹಿ ನಿರ್ದೇಶಕರು ಮನವರಿಕೆ ಮಾಡಿಕೊಂಡರೆ ಮಾದರಿಯೆನಿಸುತ್ತದೆ. ಹಾಗಾದಾಗ ಅಂಥ ಸೂಚನೆಗಳಿಗೂ ಬೆಲೆ ಬರುತ್ತದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ.

## ಕಾಮಿಡಿ ಕಿಚಡಿಗಳು

ಝೀ ಕನ್ನಡ ವಾಹಿನಿಯಲ್ಲಿ 'ಕಾಮಿಡಿ ಕಿಲಾಡಿಗಳು' ಹೊಸ ಸೀಸನ್ ರಿಯಾಲಿಟಿ ಶೋ ಆರಂಭವಾಗಿದೆ. ಅದೇ ಹಳೆಯ ಹಳಸಲು ಪಾತ್ರಧಾರಿಗಳು ಮತ್ತೆ ಬಣ್ಣ ಹಚ್ಚಿ ಅಮಿತಾವೇಷದಿಂದ ಕ್ರಿಕೆಟ್ ಟೀಂಗಳ ಹೆಸರಿನಲ್ಲಿ ಎಂಟ್ರಿ ಕೊಟ್ಟಿದ್ದಾರೆ. ಹೊಸ ಹೊಸ ಡಬಲ್ ಮೀನಿಂಗ್ ಹೊಸೆಯುತ್ತಿದ್ದಾರೆ. ಸ್ತ್ರೀ ವೇಷಗಳಲ್ಲಿಯೇ ಅಭಿನಯಿಸಿ ತಾವು ಪುರುಷರೆಂಬುದನ್ನೇ ಮರೆತ ಕಲಾವಿದರು ಮತ್ತೆ ಹೊಸ ಸೀರೆ, ಚೂಡಿ, ಲಂಗ ಖರೀದಿಸುತ್ತಿದ್ದಾರೆ.

ಕಥೆಗಾರರು ಇವನ ಹೆಂಡತಿಗೆ ಅವನು, ಅವನ ಹೆಂಡತಿಗೆ ಇವನು ಲೈನ್ ಹೊಡೆಯುವ ಕಥೆಗಳ ಸ್ಟಾಕ್ ಖಾಲಿಯಾಗಿ ಈಗ ಯಾರ ಹೆಂಡತಿಯ ಮೇಲೆ ಕಣ್ಣು ಹಾಕಿಸೋಣವೆಂದು ಯೋಚಿಸುತ್ತಿದ್ದಾರೆ. ಕಳೆದ ಸೀಸನ್ನಿನಲ್ಲಿ ತೆಗೆದಿಟ್ಟ ಅದೇ ಸೆಣಬಿನ ಬೆತ್ತದಿಂದ ಈಗಲೂ ಒಬ್ಬರಿಗೊಬ್ಬರು ಹೊಡೆಯುವ ದೃಶ್ಯಗಳನ್ನು ನೋಡಿ ನಗೆ ಬಾರದಿದ್ದರೂ ನಗಲು ತೀರ್ಪುಗಾರರು ಕುರ್ಚಿಗಂಟಿ ಕುಳಿತಿದ್ದಾರೆ. ಕನ್ನಡಿಗರೇ ಸನ್ನದ್ಧರಾಗಿರಿ ಕಾಮಿಡಿ ಕಿಚಡಿಗಳು ವೀಕ್ಷಿಸಲು!

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

## ಸ್ಫೂರ್ತಿಯ ಚಿಲುಮೆ

ಸೆಪ್ಟೆಂಬರ್ 19ನೇ ತಾರೀಖಿನಂದು ಝೀ ಕನ್ನಡದಲ್ಲಿ ಪ್ರಸಾರವಾದ 'ಮಹಾನಾಯಕ' ಸಂಚಿಕೆಯು ಅತ್ಯಮೋಘವಾಗಿತ್ತು. ಚಿಕ್ಕವಯಸ್ಸಿನಲ್ಲಿಯೇ ತಂದೆ ರಾಮ್ ಜಿ, ಭೀಮನಲ್ಲಿ ಬಿತ್ತುವ ಆದರ್ಶಗಳು ಹಾಗೂ ಅವು ಆತನ ಮೇಲೆ ಬೀರುವ ಪ್ರಭಾವಗಳು ಸ್ಫೂರ್ತಿದಾಯಕ. ಬ್ಯಾರಿಸ್ಟರ್ ಮುಂದೆ ನಡೆಯುವ ಕನ್ನಡಿಯ ಪ್ರಸಂಗ ಅದ್ಭುತವಾಗಿತ್ತು. ನನ್ನ ಮುಖ ನಾನೇ ನೋಡಿಕೊಳ್ಳುವಂತೆ ಇರಬೇಕು ಎಂಬ ಮಾತಿನಲ್ಲಿ ನಮ್ಮ ಪ್ರತಿ ನಡೆಯಲ್ಲಿ ನಾವು ತೋರಿಸಬೇಕಾದ ಪ್ರಾಮಾಣಿಕತೆ, ಧೈರ್ಯ, ಸತ್ಯ, ಧರ್ಮ, ಆದರ್ಶ ಇವುಗಳೆಲ್ಲವನ್ನೂ ಬಿಂಬಿಸುವಂತೆ ಇತ್ತು. ಈ ಮಾತುಗಳನ್ನು ಹೇಳುತ್ತಾ ತಂದೆ ರಾಮ್ ಜಿ ಭೀಮನನ್ನು ಎತ್ತಿಕೊಂಡಾಗ ಕನ್ನಡಿಯಲ್ಲಿ ಮೂಡುವ ತಂದೆ ಮಗನ ಪ್ರತಿಬಿಂಬ ಮನಮುಟ್ಟುವ ಹಾಗೆ ಇತ್ತು. 'ಮಹಾನಾಯಕ'ದಂತಹ ಧಾರಾವಾಹಿಗಳು ಮತ್ತಷ್ಟು ಪ್ರಸಾರವಾಗಲಿ ಹಾಗೂ ಇಂದಿನ ಯುವಜನತೆಗೆ ಸ್ಫೂರ್ತಿ ತುಂಬಲಿ.

—ಶಿಲ್ಪಾ ಶೇಖರ್, ಮೈಸೂರು